ಶ್ರೀ ಎಸ್. ಕರಿಯಪ್ಪ —ಸ್ವಾಮಿ, ಈಗ ಟ್ರಾಕ್ಟರ್ ತೆಗೆದುಕೊಂಡವರು ಅವರ ಜಮೀನನ್ನು ಉತ್ತುಕೊಳ್ಳುವುದಕ್ಕೆ ಎಂದು ಜನರಲ್ ಆಗಿ ಅಭಿಪ್ರಾಯ ಇದೆ, ಈಗ ಆಳು ಕಾಳು ಸಿಕ್ಕದೇ ತೊಂದರೆ ಇರುವುದರಿಂದ, ಪಕ್ಕದ ಊರಿನಲ್ಲಿರತಕ್ಕ ರೈತರು ಈ ಟ್ರಾಕ್ಟರ್ ಸರ್ವೀಸಸ್ ಪಡೆಯುವುದಕ್ಕೆ ಅಡ್ಡಿ ಏನಾದರು ಉಂಟೆ ?

†ಶ್ರೀ ಎನ್. ಚಿಕ್ಕೇಗೌಡ.—ಟ್ರಾಕ್ಟರನ್ನು ತೆಗೆದುಕೊಂಡವರು ಬೇರೆಯವರು ಉಪಯೋಗಿಸಿಕೊಳ್ಳುವುದಕ್ಕೂ ಕೊಡಬಹುದು ಅದಕ್ಕೆ ಯಾವ ಅಡ್ಡಿ ಇಲ್ಲ.

Lift-Irrigation Schemes in Savanur Taluk

473. SRI M. M. NADAF (Shiggaon).—Will the Minister of State for Minor Irrigation be pleased to state.—

(*a*) whether the Government are aware that two lift Irrigation Schemes one at Kunimellihalli and another at Mantagani Villages of Savanur Taluk have been commenced to irrigate about six to seven hundred acres of land ;

(*b*) whether it is a fact that the supply of water to the above lands is proposed to be stopped by the PWD Authorities after 15th February 1976 ;

(*c*) if so, the steps taken to save the summer and rabi crop grown by the agriculturists through this lift irrigation schemes and to avoid loss to the agriculturists ?

SRI S. B. NAGARAL (Minister of State for Minor Irrigation).—

(*a*) Yes.

L.I S. at Kunimellihalli to irrigate 940 Acres.
L I.S. at Mantagani to irrigate 989 Acres,

(*b*) No.-

(*c*) Does not arise in view of reply to item (*b*) above

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ತಾವು ೧೫ನೇ ಫೆಬ್ರುವರಿ ೧೯೭೬ರ ನಂತರ ಸದರಿ ಜಮೀನುಗಳಿಗೆ ನೀರು ಸರಬರಾಜು ನಿಲ್ಲಿಸುವುದಿಲ್ಲ ಎಂದು ಹೇಳಿದ್ದೀರಿ, ಈಗ ರಾಬಿ ಕ್ರಾಪ್ ಬರುವವರೆಗೆ ನೀರು ನಿಲ್ಲಿಸುವುದಿಲ್ಲ ಎಂದು ಆಶ್ವಾಸನೆ ಕೊಡುತ್ತೀರಾ ?

† ಶ್ರೀ ಎಸ್. ಬಿ. ನಾಗರಾಳ್.—ಈಗ ಸದ್ಯಕ್ಕೆ ನೀರು ನಿಲ್ಲಿಸುವುದಿಲ್ಲ ಎಂದು ಹೇಳಿದ್ದೇವೆ. ಈಗ ೯೫೦ ಎಕರೆ ಅಚ್ಚುಕಟ್ಟು ಡೆವಲಪ್‌ಮೆಂಟ್ ಆಗಿಲ್ಲ, ಈ ವರ್ಷಕ್ಕೆ ಸಾಕಾಗುವಷ್ಟು ನೀರು ಸಿಕ್ಕುತ್ತದೆ, ಈಗ ಸದ್ಯಕ್ಕೆ ನೀರು ನಿಲ್ಲಿಸುವುದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಎಂ. ಎಂ. ನಡಾಫ್.—ಈಗ ಕುನ್ನಿಮಳ್ಳಿ, ಮಂತಗಾನಿ ಎರಡು ನೀರಾವರಿ ಯೋಜನೆಯಲ್ಲಿ ೯೫೦ ಎಕರೆ, ೯೮೦ ಎಕರೆ ನೀರಾವರಿಗೆ ಒಳಪಡುವುದು ಎಂದುಹೇಳಿದ್ದೀರಿ, ಈಗ ಸದ್ಯಕ್ಕೆ ಎಷ್ಟು (ಎಕರೆಗೆ) ನೀರು ಒದಗಿಸುತ್ತೀರಾ ಎಂಬುದನ್ನು ತಿಳಿಸುತ್ತೀರಾ ?

†Asterisks indicate that remarks or speeches have not been revised by the member concerned.

ಶ್ರೀ ಎಸ್. ಬಿ. ನಾಗರಾಳ್.— ಈಗ ಮಂತಗಾನಿ ಏತ ನೀರಾವರಿ ಯೋಜನೆಯಲ್ಲಿ ೧೫ಳ ಎಕರೆಗೆ ನೀರು ಕೊಟ್ಟಿದ್ದೇವೆ ಎಂದು ಹನಗೆ ಬಂದಿರತಕ್ಕ ರಿಪೋರ್ಟ್‌ನಲ್ಲಿ ಇದೆ.

ಶ್ರೀ ಎಂ. ಎಂ. ನಡಾಫ್.—ಕಂನ್ಸಿಮಳ್ಳಿ ಏತ ನೀರಾವರಿ ಯೋಜನೆಯಲ್ಲಿ ಎಷ್ಟು ಎಕರೆಗೆ ನೀರು ಕೊಟ್ಟಿದೆ ಎಂಬುದನ್ನು ತಿಳಿಸಲಿಲ್ಲ.

ಶ್ರೀ ಎಸ್. ಬಿ ನಾಗರಾಳ್.—ಅದರಲ್ಲಿ ೪ಳ ಹೆಕ್ಟರ್ ರಾಬಿ ಇರಿಗೇಷನ್ ಆಗುತ್ತದೆ.

Allotment of Foodgrains and Sugar in Chickmagalur District.

528. SRI M. MALLAPPA (Birur).—Will the Minister for Food and Civil Supplies be pleased to state :—

(*a*) whether it has come to the notice of the Government that the District Central Co-operative Wholesale Stores in Chickmagalur has been authorised as wholesale agent to deal in foodgrains and sugar distribution for the whole district ;

(*b*) the quantity of foodgrains and sugar allotted to the Co-operative Societies and private merchants in Chickmagalur District ?

SMT. E. E. VAZ (Minister for Food and Civil Supplies).—(*a*) The District Central Co-operative Wholesale Stores in Chickmagalur has been entrusted with the wholesale agency for Chickmagalur and Tarikere Taluks only.

(*c*) *Vide* Statement placed on the Table of the House.

ಶ್ರೀ ಎಂ. ಮಲ್ಲಪ್ಪ —ಈಗ ತಮ್ಮ ಉತ್ತರದಲ್ಲಿ ಚಿಕ್ಕಮಗಳೂರು, ಹಾಸನ ತರೀಕೆರೆಗೆ ಸಂಬಂಧಿಸಿದಂತೆ ಸಗಟು ಮಾರಾಟ ಏಜೆನ್ಸಿಯನ್ನು ವಹಿಸಿಕೊಡಲಾಗಿದೆ ಎಂದು ಹೇಳಿದ್ದೀರಿ, ಪಕ್ಕದ ತಾಲೋಕಿನಲ್ಲಿ ವ್ಯವಹಾರ ಮಾಡುವುದಕ್ಕೆ, ಈ ಸಂಸ್ಥೆಗೆ ಏತಕ್ಕೆ ವಹಿಸಿಕೊಟ್ಟಿಲ್ಲ ?

† ಶ್ರೀಮತಿ ಇ. ಇ. ವಾಜ್.—ಈಗ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಗಟು ವ್ಯಾಪಾರ ಮಾಡುವ ಸಂಘಗಳು ೧೫ ಇವೆ ಅವರಲ್ಲಿ ೯ ಸಹಕಾರ ಸಂಘಗಳ ಮೂಲಕ ಏಜೆನ್ಸಿ ಇದ್ದು ಮಾರಾಟ ವಾಗುತ್ತಿದೆ. ಇನ್ನುಳಿದ ೬ ಪ್ರೈವೇಟ್ ಇಂಡಿವಿಜುಯೆಲ್ ಮುಖಾಂತರ ಆಗುತ್ತಿದೆ. ನಾವು ಮೊದಲು ಸಹಕಾರ ಸಂಘಗಳ ಮುಖಾಂತರ ವಿತರಣೆ ಮಾಡಬೇಕೆಂದು ಕೊಟ್ಟಾಗ ಅನೇಕ ಕಡೆಗಳಲ್ಲಿ ಅವರು ಪದಾರ್ಥಗಳನ್ನು ಲಿಫ್ಟ್ ಮಾಡಲಿಲ್ಲ, ಅವರ ಇಷ್ಟ ಬಂದಾಗ ಪದಾರ್ಥಗಳನ್ನು ಲಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅವರನ್ನು ಕಾರಣ ಕೇಳಿದಾಗ ನಮ್ಮ ಹತ್ತಿರ ಹಣ ಇಲ್ಲ ಎಂದು ೧೦೦ ಮೂಟೆ ಲಿಫ್ಟ್ ಮಾಡಿದರು ನಂತರ ಆ ೧೦೦ ಮೂಟೆಗಳು ಖರ್ಚಾದ ಮೇಲೆ ಮತ್ತೆ ೧೦೦ ಮೂಟೆ ಲಿಫ್ಟ್ ಮಾಡುತ್ತಿದ್ದರು, ಇದರಿಂದ ತೊಂದರೆಯಾಗುತ್ತದೆ. ನಾವು ಪ್ರೈವೇಟ್ ಇಂಡಿವಿಜುಯಲ್ಸ್, ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಡೆಪ್ಯುಟಿ ಕಮೀಷನರು ಹೇಳಿದರು. ನಾನು ಪರಿಶೀಲನೆ ಮಾಡಿದಂತೆ ಕೆಲವು ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡಿಲ್ಲ, ಈಗ ಪ್ರೈವೇಟ್ ಇಂಡಿವಿಜುಯಲ್ಸ್‌ನಿಂದ ಏನಾದರೂ ತೊಂದರೆಯಾಗಿದ್ದರೆ, ಅಲ್ಲಿ ಸಹಕಾರ ಸಂಘ ಕೊಟ್ಟು ಅನುಕೂಲವಾಗುವಂತೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಈಗ ಸಹಕಾರ ಸಂಘಗಳಲ್ಲಿ ಮಾರಾಟ ವ್ಯವಸ್ಥೆ ಸರಿಯಾಗಿ ಮಾಡದೇ ಇದ್ದರೆ, ಅವರಿಗೆ ಬರವಣಿಗೆ ಮೂಲಕ ತಿಳಿವಳಿಕೆ ಕೊಟ್ಟು ಅವರ ಸಮಜಾಯಿಷಿ ಪಡೆದು ಅದನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಅಥವಾ ಹಾಗೆ ಹೇಳುವುದು ಇದ್ದರೆ ಅದಕ್ಕೆ ಏನಾದರೂ ದಾಖಲೆ ಇದೆಯೇ ?